ಕರ್ನಾಟಕ ವಿಧಾನ ಸಭೆ

ಮಂಗಳವಾರ ೨೪ನೇ ಆಗಸ್ಟ್ ೧೯೯೩

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ ೧೧--೦೦ ಗಂಟೆಗೆ
ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ವಿ.ಎಸ್. ಕೌಜಲಗಿ ಅವರು)
ಪೀಠವನ್ನು ಅಲಂಕರಿಸಿದ್ದರು.

-:೦:-

ಶ್ರೀ ವಾಟಾಳ್ ನಾಗರಾಜ್ :- ಸನ್ಮಾನ್ಯ ಅಧ್ಯಕ್ಷರೆ, ಈಗ ಈ ಸಭೆಯನ್ನು ಮುಂದಕ್ಕೆ ಹಾಕಬೇಕೆಂದು ಪ್ರಾರ್ಥನೆ ಮಾಡುತ್ತಿದ್ದೇನೆ. ಮಾನ್ಯ ಗುಂಡೂರಾವ್‌ರವರ ಪಾರ್ಥಿವ ಶರೀರವು ಇಂದು ಬೆಂಗಳೂರಿಗೆ ಬರುತ್ತಿದೆ. ನಾವು ಎರಡು ಗಂಟೆಗೆ ಆದನ್ನು ಎದುರುಗೊಳ್ಳತಕ್ಕ ಪರಿಸ್ಥಿತಿ ಇರುವುದರಿಂದ, ಮತ್ತು ಇವತ್ತು ನಾವೆಲ್ಲರೂ ದುಃಖಕರವಾದ ಸನ್ನಿವೇಶದಲ್ಲಿ ಇರುವುದರಿಂದ ಈ ಸಭೆಯನ್ನು ನಡೆಸಬೇಕೆನ್ನುವುದು ಸರಿಯಲ್ಲ. ಈ ಸಮಯದಲ್ಲಿ ಸಭೆಯನ್ನು ನಡೆಸುವುದು ಸರಿಯಾಗುವುದಿಲ್ಲ, ಸಭೆಯನ್ನು ನಡೆಸಿದರೆ ಒಂದು ರೀತಿಯ ವೇದನೆ ಮತ್ತು ನೋವು ಆಗುತ್ತದೆ. ಆದ್ದರಿಂದ ದಯಮಾಡಿ ತಾವು ಯಾವುದೇ ಕಾರ್ಯಕಲಾಪವನ್ನು ನಡೆಸದೆ ಈ ಸಭೆಯನ್ನು ಮುಂದಕ್ಕೆ ಹಾಕಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ತಾವು ಯಾವುದೇ ಕಲಾಪ ಇಲ್ಲವೇ ಪ್ರಶ್ನೋತ್ತರ ಕಾಲ ಆಗಲಿ, ಆಮೇಲೆ ಸಭೆಯನ್ನು ಮುಂದಕ್ಕೆ ಹಾಕೋಣವೆಂದು ಹೇಳಿದರೆ ಅದು ಸರಿಯಲ್ಲ, ಅದು ಗೌರವದ ನೀತಿಯಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮತ್ತು ಅಧ್ಯಕ್ಷರಲ್ಲಿ ಮನವಿ ಮಾಡುತ್ತಿದ್ದೇನೆ. ಪ್ರಶ್ನೋತ್ತರ ಕಾಲವನ್ನು 1 ಗಂಟೆ ನಡೆಸಿ ಮತ್ತೆ ಮಧ್ಯಾಹ್ನ ಮುಂದಕ್ಕೆ ಹಾಕುತ್ತೇವೆಂದು

ಹೇಳುವುದರಿಂದ ಆದು ಸರಿಯಾದಂತಹ ನಿರ್ಧಾರವಾಗುವುದಿಲ್ಲ. ಆದುದರಿಂದ ತಾವು ದಯವಿಟ್ಟು ಸಭೆಯನ್ನು ಮುಂದಕ್ಕೆ ಹಾಕಬೇಕೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ :- ಮಾನ್ಯ ವಾಟಾಳ್ ನಾಗರಾಜ್ ಅವರು ಏನು ಅಭಿಪ್ರಾಯ ಪಟ್ಟಿದ್ದಾರೆ ಅದಕ್ಕೆ ನಮ್ಮ ಭಿನ್ನಾಭಿಪ್ರಾಯವೇನೂ ಇಲ್ಲ. ನಾವೂ ಕೂಡ ಅದನ್ನು ಒಪ್ಪಿಕೊಳ್ಳುತ್ತೇವೆ. ಶ್ರೀಮಾನ್ ಗುಂಡೂರಾಯರ ಪಾರ್ಥಿವ ದೇಹ ಇಲ್ಲಿಗೆ ಬರುವುದಿದೆ ನಾವು ಅಲ್ಲಿಗೆ ಹೋಗಬೇಕಾಗುತ್ತದೆ. ನಿನ್ನೆಯೇ ಹೇಳಿದ ಹಾಗೆ, ಅವರು ಪಕ್ಷಾತೀತ ವ್ಯಕ್ತಿ, ಪ್ರತಿಯೊಬ್ಬರಿಗೂ ಅವರ ಬಗ್ಗೆ ಅಭಿಮಾನ ಇದೆ. ತಮ್ಮ ರೂಲ್ಸ್ ಏನು ಇದೆ ಅದನ್ನು ನೋಡಿ ವಿತೌಟ್ ಟ್ರಾನ್ಸ್‌ಆಕ್ಷನ್ ಅಡ್ಜರ್ನ್ ಮಾಡಲಿಕ್ಕೆ ಸಾಧ್ಯವಿದ್ದರೆ ಅದನ್ನು ಮಾಡಬಹುದು. ಅದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಆ ರೀತಿ ಮಾಡಲಿಕ್ಕೆ ಸಾಧ್ಯವಿಲ್ಲದಿದ್ದರೆ ಏನು ಮಾಡಬೇಕೆಂಬ ಬಗ್ಗೆ ತಾವು ನಿರ್ಣಯ ತೆಗೆದುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು :- ನಾವು ಏನು ಪ್ರಶ್ನೆಗಳನ್ನು ಕೇಳಿದ್ದೇವೆ, ಅದನ್ನು ಮುಂದಕ್ಕೆ ಹಾಕಬೇಕು. ಅವುಗಳನ್ನು ಲ್ಯಾಪ್ಸ್ ಮಾಡುವುದು ಸರಿಯಾಗುವುದಿಲ್ಲ. ದಯವಿಟ್ಟು ಲ್ಯಾಪ್ಸ್ ಮಾಡಬೇಡಿ.

ಶ್ರೀ ಎಂ.ಪಿ. ವೆಂಕಟೇಶ :- ಮಾನ್ಯ ವಾಟಾಳ್ ನಾಗರಾಜ್ ಅವರು ಏನು ಹೇಳಿದರು ಅದನ್ನು ನಾನು ಬೆಂಬಲಿಸುತ್ತೇನೆ. ಆವರ ಪಾರ್ಥಿವ ಶರೀರ ಬರುತ್ತಿರುವುದರಿಂದ ನಾವೆಲ್ಲಾ ಅಲ್ಲಿ ಹೋಗಿ ಸ್ವಾಗತ ಮಾಡತಕ್ಕಂತಹ ಕಾರ್ಯಕ್ರಮ ಇದೆ. ತಾವು ದಯವಿಟ್ಟು ಈ ಸಭೆಯನ್ನು ಮುಂದೂಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ನಮಗೆ ಗೊತ್ತಿದ್ದ ಹಾಗೆ, ಇದಕ್ಕೆ ಕಾನೂನು ಅಡ್ಡಿ ಬರುವುದಿಲ್ಲ. ತಾವು ಈಗ ಇಲ್ಲಿ ಬಂದಿದ್ದೀರಿ ತಾವು ಸಭೆಯನ್ನು ಅಡ್ಜರ್ನ್ ಮಾಡುವುದು ಇದ್ದರೆ ಆದಕ್ಕೆ ಕಾನೂನು ಅಡ್ಡಿ ಬರುವುದಿಲ್ಲ. ನಮ್ಮನ್ನು ಅಗಲಿದಂತಹ ಸನ್ಮಾನ್ಯ ನಾಯಕರಾದ ಗುಂಡೂರಾಯರಿಗೆ ವಿಶೇಷವಾದ ವಿಶ್ವಾಸ ಮತ್ತು ಅಭಿಮಾನ, ಗೌರವವನ್ನು ತೋರಿಸುವ ದೃಷ್ಟಿಯಿಂದ ನಾವು ವಿಚಾರ ಮಾಡಬೇಕಾಗುತ್ತದೆ. ಮೊದಲು ತಾವು ಪ್ರಶ್ನೋತ್ತರ ವೇಳೆ ಆಗಲಿ ಆಮೇಲೆ ಸಭೆಯನ್ನು ಅಡ್ಜರ್ನ್ ಮಾಡೋಣವೆಂದು ವಿಚಾರ ಮಾಡಿದ್ದಿರಿ. ಮತ್ತು ನಾಳೆಯೂ ಕೂಡ ಆವರ ಮರಣೋತ್ತರ ಕ್ರಿಯೆ ಇರುವುದರಿಂದ ಈ ಸದನವನ್ನು ಅಡ್ಜರ್ನ್ ಮಾಡಿ ಮತ್ತೆ 26ನೇ ತಾರೀಖು ಬೆಳಿಗ್ಗೆ ಸೇರೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಸಭೆಯನ್ನು ಇವತ್ತು ಮತ್ತು ನಾಳೆ ಅಡ್ಜರ್ನ್ ಮಾಡಿ ನಾಡಿದ್ದು ಸೇರಬಹುದು. ಆದರೆ ಇವತ್ತು ಮತ್ತು ನಾಳೆಯ ಪ್ರಶ್ನೋತ್ತರಗಳು ಲ್ಯಾಪ್ಸ್ ಆಗದೇ ಇರುವ ಹಾಗೆ ನೋಡಿಕೊಳ್ಳಬೇಕು. ಆದರ ಕಡೆಗೆ ತಾವು ಗಮನ ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಪ್ರಶ್ನೆಗಳು ಲ್ಯಾಪ್ಸ್ ಆಗಬಾರದು. ಈ ಸಭೆಯನ್ನು 3 ನೇ ತಾರೀಖಿನವರೆಗೆ ಮುಂದುವರಿಸಬೇಕೆಂದು ಇತ್ತು. ಆದ್ದರಿಂದ ಅದನ್ನೂ 2 ದಿವಸ ಮುಂದುವರಿಸಬೇಕಾಗುತ್ತದೆ.

ಅಧ್ಯಕ್ಷರು :- ಇಲ್ಲ ಆ ವಿಷಯ ಇಲ್ಲಿ ಪ್ರಸ್ತಾಪದಲ್ಲಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ :- ಮಾನ್ಯ ಸಭಾ ನಾಯಕರು ಇವತ್ತು ಮತ್ತು ನಾಳೆ ಸಭೆಯನ್ನು ಮುಂದೂಡಬಹುದು ಎಂದು ಏನು ಅಭಿಪ್ರಾಯ ಪಟ್ಟಿದ್ದಾರೆ ಅದರ ಬಗ್ಗೆ ನನ್ನದು

ಭಿನ್ನಾಭಿಪ್ರಾಯವಿಲ್ಲ. ನಾಳೆ ಅವರ ಅಂತಿಮ ಸಂಸ್ಕಾರ ಇದೆ. 26ನೇ ತಾರೀಖು ಮತ್ತೆ ಸೇರಬಹುದೆಂದು ಸಭಾ ನಾಯಕರು ಹೇಳಿದ್ದಾರೆ. ಅವರ ಸಲಹೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಉಪ ನಾಯಕರು ಹೇಳಿದ ಹಾಗೆ ಇವತ್ತು ಮತ್ತು ನಾಳೆ ಏನು ಪ್ರಶ್ನೆಗಳಿದ್ದವು ಅವುಗಳು ಲ್ಯಾಪ್ಸ್ ಆಗಬಾರದು. ಏಕೆಂದರೆ ಹಲವಾರು ಮಹತ್ವದ ಪ್ರಶ್ನೆಗಳನ್ನು ನಮ್ಮ ಶಾಸಕ ಮಿತ್ರರು ಹಾಕಿದ್ದಾರೆ. ಅದಕ್ಕೆ ಉತ್ತರ ಬರಬೇಕಾಗುತ್ತದೆ. ಆದ್ದರಿಂದ ಅವನ್ನು ಯಾವ ತರಹ, ಯಾವ ದಿನ ತೆಗೆದುಕೊಳ್ಳುತ್ತೀರೋ ಅದನ್ನು ತಮಗೇ ಬಿಡುತ್ತೇನೆ. ಆ ವ್ಯವಸ್ಥೆ ಮಾಡಿ ತಾವು ಸಭೆಯನ್ನು ಅಡ್ಜರ್ನ್ ಮಾಡಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ : – ಕೇವಲ ಪ್ರಶ್ನೋತ್ತರಗಳು ಮಾತ್ರ ಅಲ್ಲ 2 ದಿವಸ ಸಭೆಯನ್ನು ಅಡ್ಜರ್ನ್ ಮಾಡುವುದರಿಂದ ಮತ್ತೆ ಇನ್ನೆರಡು ದಿವಸ ಸಭೆಯನ್ನು ಮುಂದುವರಿಸಬೇಕಾಗುತ್ತದೆ.

ಅಧ್ಯಕ್ಷರು : – ಅದನ್ನು ನಾನು ವಿಚಾರ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : – ಅವರು ಹೇಳುವುದು ಮುಖ್ಯ ಇದೆ. ನಾನು ಕಾವೇರಿ ವಿಚಾರದಲ್ಲಿ ನಿಮಗೆ ಅಡ್ಜರ್ನ್‌ಮೆಂಟ್ ಮೋಷನ್ ಕಳಿಸಿದ್ದೇನೆ. ಕೆಲವು ಟೆಕ್ನಿಕಲ್ ವಿಚಾರಗಳೂ ಬರುತ್ತವೆ. ಕೆ.ಇ.ಬಿ ಯವರು ವಿದ್ಯುತ್ ದರವನ್ನು ಹೆಚ್ಚು ಮಾಡಿದ್ದಾರೆ. ಅದರ ಬಗ್ಗೆ ನಿಯಮ 68 ರಲ್ಲಿನೋಟೀಸ್ ಕಳಿಸಿದ್ದೇನೆ. ರಾಜ್ಯದಲ್ಲಿ ಭೀಕರ ಬರಗಾಲವಿದೆ. ಸರಕಾರ ವಿಫಲವಾಗಿದೆ, ನಿಷ್ಕ್ರಿಯತೆಯಾಗಿದೆ, ಮತ್ತೊಂದು ಆಗಿದೆ ರೂಲ್ 68 ರಲ್ಲಿ ಕೊಟ್ಟಿದ್ದೇನೆ. ಅದರ ಬಗ್ಗೆ ತಾವು ತೀರ್ಮಾನ ಮಾಡಬೇಕು. ಏಕೆಂದರೆ ಪುನಃ ನೋಟೀಸನ್ನು ಕೊಡಬೇಕೆಂದು ತಾವು ಆದೇಶ ನೀಡಿದರೆ ಮತ್ತೊಮ್ಮೆ ಕೊಡುತ್ತೇನೆ. ಈಗಾಗಲೇ ನಮ್ಮ ಕರ್ತವ್ಯ ನಾವು ಮಾಡಿದ್ದೇವೆ. ಹಲವಾರು ಇಂಪಾರ್ಟೆಂಟ್ ವಿಷಯಗಳಿವೆ. ಅದನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : – ಮಿಕ್ಕ ವಿಚಾರಗಳಿಲ್ಲಿ ಪ್ರಸ್ತಾಪವಾಗುವುದು ಬೇಕಾಗಿಲ್ಲ. ಅದನ್ನು ಆಮೇಲೆ ಮಾತನಾಡೋಣ. ಆಗಲಿದ ಗುಂಡೂರಾಯರ ಗೌರವಾರ್ಥವಾಗಿ ಇವತ್ತು ಮತ್ತು ನಾಳೆ ಸದನಕ್ಕೆ ರಜೆ ನೀಡಬೇಕಾಗುತ್ತದೆ. ಮತ್ತೇನಾದರೂ ಗುಂಡೂರಾಯರ ಸ್ಮಾರಕ ಮಾಡತಕ್ಕಂತಹ ವಿಚಾರ ಸರಕಾರಕ್ಕಿದ್ದರೆ ಅದನ್ನು ಇಲ್ಲಿ ಹೇಳಲಿ ನಾವು ಕೇಳುತ್ತೇವೆ. ಇವತ್ತೇ ಬೇಕಾದರೆ ಹೇಳಲಿ. ಅದರ ಬಗ್ಗೆ ನಮ್ಮದೇನೂ ತಕರಾರಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : – ಇವತ್ತು ನಾಳೆ ಅಧಿವೇಶನ ಇಲ್ಲದಿರುವುದರಿಂದ ಮತ್ತೆ 2 ದಿನ ಅವಕಾಶ ಮಾಡಿಕೊಡಬೇಕಾಗುತ್ತದೆ. ಅಧಿವೇಶನ ಕರೆದಿರುವುದು ತುಂಬಾ ಕಡಿಮೆ ಅವಧಿ ಇರುವುದರಿಂದ ಮತ್ತೆ 2 ದಿನ ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ.

ಅಧ್ಯಕ್ಷರು : – ಆ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿಲ್ಲ. ಈಗ ಸರ್ವ ಸದಸ್ಯರ ಅಭಿಪ್ರಾಯ ಏನಿದೆ ಎಂಬುದನ್ನು ತಿಳಿಸಿದರೆ ಅದರ ಬಗ್ಗೆ ನಾನು ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : – ಇವತ್ತು ಇರತಕ್ಕ ಪ್ರಶ್ನೆಗಳು ಲ್ಯಾಪ್ಸ್ ಆಗಿ ಹೋಗದಂತೆ ತಾವು ವ್ಯವಸ್ಥೆ ಮಾಡಬೇಕು. ಎರಡು ದಿನಗಳ ಕಾಲ ಈ ಸದನವನ್ನು ಮುಂದುವರಿಸಬೇಕು.

ಶ್ರೀ ಬಿ.ಎಂ. ಇದಿನಬ್ಬ : – ಮಾನ್ಯ ಅಧ್ಯಕ್ಷರೆ, ತಾವು ಸದನವನ್ನು ಮುಂದೂಡುವುದಾದರೆ ಇವತ್ತು ಮತ್ತು ನಾಳೆಯ ಪ್ರಶ್ನೆಗಳು ಏನಿವೆ ಇವು ಪುನಃ ಸದನದಲ್ಲಿ ಬರುವಂತೆ ಮಾಡಬೇಕು.

ಏಕೆಂದರೆ, ಇವು ಬಹಳ ಪ್ರಾಮುಖ್ಯವಾದ ಪ್ರಶ್ನೆಗಳಾಗಿವೆ.

ಅಧ್ಯಕ್ಷರು:- ತಮ್ಮೆಲ್ಲರ ಅಭಿಪ್ರಾಯಕ್ಕನುಗುಣವಾಗಿ ಇವತ್ತಿನ ಸಭೆಯ ಕಾರ್ಯಕಲಾಪಗಳನ್ನು 26ನೇ ತಾರೀಖು ಬೆಳಿಗ್ಗೆ 11 ಗಂಟೆಯ ವರೆಗೂ ಮುಂದೂಡಿದ್ದೇನೆ. ಇವತ್ತು ಮತ್ತು ನಾಳೆಯ ದಿನದ ತಮ್ಮ ಪ್ರಶ್ನೆಗಳೇನಿವೆ ಅವುಗಳು ಯಾವುದೂ ಕೂಡ ಲ್ಯಾಪ್ಸ್ ಆಗುವುದಿಲ್ಲ. ಅವುಗಳನ್ನು ಮುಂದೆ ತೆಗೆದುಕೊಳ್ಳುತ್ತೇನೆ.

ಇನ್ನು ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಚಾರವನ್ನು ತರುವುದಾದರೆ, ಮಾನ್ಯ ಗುಂಡೂರಾಯರ ಪಾರ್ಥಿವ ಶರೀರವನ್ನು ಬರಮಾಡಿಕೊಳ್ಳಲು ಶಾಸಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಶಾಸಕರ ಭವನದಿಂದ 6 ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ. ಆದ್ದರಿಂದ ಎಲ್ಲ ಮಾನ್ಯ ಸದಸ್ಯರೂ ಮಧ್ಯಾಹ್ನ 1.00 ಗಂಟೆಗೆ ಶಾಸಕರ ಭವನದ ಹತ್ತಿರ ಹೋಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(ಸದನವು ಬೆಳಿಗ್ಗೆ 11.22 ಗಂಟೆಗೆ ಮುಕ್ತಾಯವಾಗಿ ಮತ್ತೆ ದಿನಾಂಕ 26-8-93ರ ಗುರುವಾರ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)